ಪ್ರಜಾವಾಣಿ

Tuesday, September 6, 2011

# ಎರಡನೇ ಸುತ್ತಿಗೆ ಕಾರ್ತಿಕ್

ಬೆಂಗಳೂರು: ಕರ್ನಾಟಕದ ಎಸ್ .ಕಾರ್ತಿಕ್ ಇಲ್ಲಿ ನಡೆಯುತ್ತಿರುವ ಎಐಟಿಎ ಟಾಲೆಂಟ್ ಸರಣಿ ಟೆನಿಸ್ ಟೂರ್ನಿಯ 16 ವರ್ಷ ವಯಸ್ಸಿನೊಳಗಿನವರ ವಿಭಾಗದಲ್ಲಿ ಎರಡನೇ ಸುತ್ತು ಪ್ರವೇಶಿಸಿದ್ದಾರೆ.

ಜೈನ್ ಅಂತರರಾಷ್ಟ್ರೀಯ ವಸತಿ ಶಾಲೆಯಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಕಾರ್ತಿಕ್ 6–0, 6–3ರಲ್ಲಿ ಬಾಲಾಜಿ ಕಾರ್ತಿಕೇಯನ್ ಎದುರು ಗೆದ್ದರು. ವರುಣ್ ವೆಂಕಟ್ 3–6, 7–6, 6–4ರಲ್ಲಿ ಪ್ರಫುಲ್ ಜೈನ್ ಎದುರೂ, ಅಲೋಕ್ ಆರಾಧ್ಯ 6–3, 6–1ರಲ್ಲಿ ಬಿ.ಎಸ್.ಅನಿರುದ್ಧ ವಿರುದ್ಧವೂ ಜಯ ಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ಕರ್ನಾಟಕದ ನಿಶಾ ಶೆಣೈ 6–2, 7–6ರಲ್ಲಿ ಶಿಲ್ಪಿ ಸ್ವರೂಪ ವಿರುದ್ಧವೂ, ನಿಕಿತಾ ಪಿಂಟೊ 6–0, 6–2ರಲ್ಲಿ ಅನಿತಾ ಮೇಲೂ ಗೆದ್ದರು.